## ಗಾಳಿಪಟದ ಹಾದಿ

ಗಾಳಿಪಟ ಆರಂಭವಾದದ್ದು ಕ್ರಿಸ್ತ ಪೂರ್ವದಲ್ಲಿ. ಜಪಾನ್, ಚೀನಾ, ಕೊರಿಯಾ ದೇಶಗಳಲ್ಲಿ. ಆಗ ಯುದ್ಧ ಸಂದೇಶಗಳನ್ನು ಗಾಳಿಪಟದ ಮೂಲಕ ಬರೆದು ಕಳುಹಿಸುತ್ತಿದ್ದರು ಎಂದು ಇತಿಹಾಸ ಹೇಳುತ್ತದೆ. ಇಂದಿಗೂ ದಕ್ಷಿಣ ಕೊರಿಯಾದಲ್ಲಿ ಹೊಸ ವರುಷದ ದಿನ ಗಾಳಿಪಟ ಆಕಾರದ ಪೇಪರ್‌ನಲ್ಲಿ ಕಳೆದ ವರುಷದಲ್ಲಿ ಮಾಡಿದ ತಪ್ಪನ್ನು ಬರೆದು ಅದನ್ನು ಎಲ್ಲರೂ ಬಂದು ಕಂಬಕ್ಕೆ ಕಟ್ಟಿ ಹೊಸ ವರುಷದಂದು ಊರಿನ ಮುಖಂಡರು ಆ ತಪ್ಪುಗಳ ರಾಶಿಗೆ ಬೆಂಕಿ ಕೊಟ್ಟು ಸಾಮೂಹಿಕವಾಗಿ ಗಾಳಿಪಟ ಹಾರಿಸುತ್ತಾರೆ. ಅಂದರೆ, ಹಳೆಯ ತಪ್ಪನ್ನು ಮರೆತು ಹೊಸ ವರುಷದ ದಿನಗಳಲ್ಲಿ ಖುಷಿಯಾಗಿ ಇರುವುದು ಎಂಬ ಸಂದೇಶ.

ಎಂಬ ಹವ್ಯಾಸಿ ಗಾಳಿಪಟ ತಂಡವನ್ನೂ ಕಟ್ಟಿದರು. ಈ ತಂಡದೊಂದಿಗೆ ನಮ್ಮ ದೇಶದ ಹತ್ತು ರಾಜ್ಯಗಳಲ್ಲಿ, ಜಗತ್ತಿನ 12 ದೇಶಗಳಲ್ಲಿ ಅಂತರರಾಷ್ಟ್ರೀಯ ಗಾಳಿಪಟ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ ಅವರು.

ಜಾಗತಿಕ ಮಟ್ಟದಲ್ಲಿ ನಡೆಯುವ ಗಾಳಿಪಟ ಉತ್ಸವಗಳಲ್ಲಿ 'ಟೀಮ್ ಮಂಗಳೂರು' ತಂಡ ಭಾರತದ ಪ್ರತಿನಿಧಿಯಾಗಿ ನಮ್ಮ ರಾಷ್ಟ್ರಧ್ವಜವನ್ನು ಎತ್ತಿ ಹಿಡಿದಿದೆ ಕೂಡ.

ಈ ಬಗ್ಗೆ ಸರ್ವೇಶ್ ರಾವ್ ಅವರು ಮತ್ತಷ್ಟು ಮಾಹಿತಿಗಳನ್ನು ಹಂಚಿಕೊಳ್ಳುತ್ತಾರೆ.




"ನಮ್ಮ ತಂಡ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ವಿನ್ಯಾಸಗಳನ್ನು ಗಾಳಿಪಟವನ್ನಾಗಿ ಮಾಡಿ ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಿದೆ. ಈ ಮೂಲಕ ನಮ್ಮ ದೇಶದ ಸಾಂಸ್ಕೃತಿಕ ವೈಭವವನ್ನು ಪ್ರಚಾರಗೊಳಿಸುವ ಪ್ರಯತ್ನ ಮಾಡುತ್ತಿದೆ. ಈಗಾಗಲೇ ಕಥಕ್ಕಳಿ, ಯಕ್ಷಗಾನ (ತೆಂಕು–ಬಡಗು) ಪುಷ್ಪಕ ವಿಮಾನ, ಭರತನಾಟ್ಯ, ಗಜರಾಜ, ಭೂತದ ಕೋಲ, ಕೋಳಿ ಕಟ್ಟಾ, ಭಾರತೀಯ ದಂಪತಿ, ಗರುಡ ಮುಂತಾದ ಬೃಹತ್ ಗಾಳಿಪಟಗಳನ್ನು ರಚಿಸಿದೆ. ನಮ್ಮ ತಂಡದ ಕಥಕ್ಕಳಿ ಗಾಳಿಪಟವು ಭಾರತದಲ್ಲೇ ಅತೀ ದೊಡ್ಡ ಗಾಳಿಪಟವೆಂದು 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ದಾಖಲೆಯಾಗಿದೆ" ಎಂದು ಹೇಳುತ್ತಾರೆ ಅವರು.

ಇದೇ ಸೆಪ್ಟೆಂಬರ್ 13ರಿಂದ ಫ್ರಾನ್ಸ್‌ನ ಡೀಪ್ಪೆ ನಗರದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಕೂಡ ಭಾಗವಹಿಸುತ್ತಿದ್ದು, ಈ ಬಾರಿ ತುಳುನಾಡಿನ ಜಾತ್ರೆ ಉತ್ಸವ ರಥದ ವಿನ್ಯಾಸದ 20 ಅಡಿ ಎತ್ತರದ ಗಾಳಿಪಟವನ್ನು ವಿನ್ಯಾಸಗೊಳಿಸಲಾಗುತ್ತಿದೆ. ಮಂಗಳೂರಿನ ಸರ್ವೇಶ್ ರಾವ್ ಅವರ ಮನೆಯ ಕೈಟ್ ವರ್ಕ್‌ಶಾಪ್‌ನಲ್ಲಿ 30 ದಿನಗಳಿಂದ ತಯಾರಿ ಕೆಲಸ ನಡೆದಿದೆ.

'ಗಾಳಿಪಟ ಮಾಡಲು ಯಾಕಿಷ್ಟು ಸಮಯ ತೆಗೆದುಕೊಳ್ಳುತ್ತೀರ' ಎಂದು ಪ್ರಶ್ನಿಸುವವರಿದ್ದಾರೆ. ಕಥಕ್ಕಳಿ ತಯಾರಿಸಲು ಒಂದು ತಿಂಗಳ ಸಮಯ ಹಿಡಿಯಿತು. ಬೃಹತ್ ಗಾತ್ರದ ಗಾಳಿಪಟಗಳು ಕೊಲಾಜ್ ಮಾದರಿಯವು. ಗಾಳಿಪಟ ರಚಿಸಲೆಂದೇ ಇರುವ ರಿಪ್ ಸ್ಟಾಪ್ ನೈಲಾನ್ ಬಟ್ಟೆಯನ್ನು ಫ್ರಾನ್ಸ್, ಇಂಗ್ಲೆಂಡ್‌ನಿಂದ ತರಿಸಿ ವಿನ್ಯಾಸಕ್ಕೆ ತಕ್ಕಂತೆ ಕತ್ತರಿಸಿ, ಅಂಟಿಸಿ ಹೊಲಿದು ಮಾಡುವ ಪ್ರಕ್ರಿಯೆ ಆಗಿರುವ ಕಾರಣ ಈ ಗಾಳಿಪಟಗಳ ರಚನೆಗೆ ತುಂಬಾ ಸಮಯ ಬೇಕಾಗುತ್ತದೆ. ಈ ತರಹದ ಸೂಕ್ಷ್ಮ ಕಸೂತಿ ಕೆಲಸದಿಂದಲೇ ನಮ್ಮ ತಂಡದ ಗಾಳಿಪಟಗಳು ಅಂತರರಾಷ್ಟ್ರೀಯ ಉತ್ಸವಗಳಲ್ಲಿ ಕಲಾತ್ಮಕ ಪಟಗಳೆಂದು ಬೇಡಿಕೆ ಮತ್ತು ಹೆಗ್ಗಳಿಕೆಯನ್ನು ಪಡೆದಿವೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಅವರು.

ರಥದ ವಿನ್ಯಾಸದ ಗಾಳಿಪಟದ ಜೊತೆ ಇನ್ನೊಂದು ಬೃಹತ್ ಗಾಳಿಪಟವನ್ನು ರಚಿಸಲಾಗುತ್ತಿದೆ. ನೀರಿನ ಬಗ್ಗೆ ಜಾಗೃತಿ ಸಂದೇಶ ಸಾರುವ ಗಾಳಿಪಟ ಇದಾಗಿದೆ.

'ಇಂದು ಇಡೀ ಜಗತ್ತಿನಲ್ಲಿ ನೀರಿನ ಸಮಸ್ಯೆಯ ಕರಾಳ ಛಾಯೆ ಆವರಿಸಿದೆ. ಕ್ಷಾಮ, ಬರಗಾಲದಂತಹ ದುರಂತಗಳು ನಡೆಯುತ್ತಿವೆ. ನೀರನ್ನು ಸಂರಕ್ಷಣೆ ಮಾಡಲೇಬೇಕು, ನೀರನ್ನು ರಕ್ಷಣೆ ಮಾಡದೇ ಇದ್ದರೆ ನಾವೇ ಭವಿಷ್ಯದಲ್ಲಿ ನೈಸರ್ಗಿಕ ದುರಂತವನ್ನು ಆಹ್ವಾನಿಸಿದಂತೆ ಆಗಬಹುದು. ಈ ಗಾಳಿಪಟದಲ್ಲಿ ದೇವರನ್ನು ಹೊರುವ ಪಲ್ಲಕ್ಕಿಯಲ್ಲಿ ನೀರಿನ ತಂಬಿಗೆಯನ್ನು ಇಡಲಾಗಿದೆ. ಪಲ್ಲಕ್ಕಿಯ ಮೇಲೆ ಆಕಾಶ, ಕೆಳಗೆ ಬೆಟ್ಟ, ಬಾಲಂಗೋಚಿಯಲ್ಲಿ ಕಾಡಿನ ವಿನ್ಯಾಸ ಮಾಡಲಾಗಿದೆ. ಅಂದರೆ ನೀರಿಗೆ ದೇವರ ಸ್ಥಾನಮಾನವನ್ನು ನೀಡಿ ಆಕಾಶ, ಬೆಟ್ಟ, ಅಡವಿಗೆ ಎಲ್ಲೂ ಸಮಸ್ಯೆ ಆಗದಂತೆ ನೋಡಿಕೊಂಡರೆ ನೀರಿನ ಸಂರಕ್ಷಣೆ ಆಗಬಹುದು ಎಂಬ ಸಂದೇಶ ಸಾರುವ ಗಾಳಿಪಟವಿದು' ಎಂದು ವಿವರಣೆ ನೀಡುತ್ತಾರೆ ಸರ್ವೇಶ್.

ಈ ಎರಡು ಗಾಳಿಪಟಗಳು ತಯಾರಿಕೆ ಹಂತದಲ್ಲಿದ್ದು, ಸೆಪ್ಟೆಂಬರ್ ತಿಂಗಳಲ್ಲಿ ಗಿರಿಧರ್ ಕಾಮತ್ ನೇತೃತ್ವದ ಆರು ಜನರ ತಂಡ ಭಾರತವನ್ನು ಪ್ರತಿನಿಧಿಸಿ ಫ್ರಾನ್ಸ್ ಗಾಳಿಪಟ ಉತ್ಸವದಲ್ಲಿ ಭಾಗವಹಿಸಲಿದೆ. ಈ ಗಾಳಿಪಟಗಳನ್ನು ಹಾರಿಸಿ ನಮ್ಮ ದೇಶದ ಸಂಸ್ಕೃತಿಯನ್ನು ಬಾನಂಗಳದಲ್ಲಿ ಪ್ರಚುರಪಡಿಸಲಿದೆ. ■

